

## ಕಲೆತ ನೀರು ಕಾರಣ

ಈಡಿಸ್ ಸೊಳ್ಳೆಗಳು ಮೊಟ್ಟೆ ಇಟ್ಟು ಮರಿ ಮಾಡಿ ತಮ್ಮ ಸಂತಾನ ವೃದ್ಧಿಸಿಕೊಳ್ಳಲು ಕೃತಕವಾಗಿ ಕಲೆತ ನೀರನ್ನು ಆಶ್ರಯಿಸಿವೆ. ನಾವು ರಸ್ತೆಯಲ್ಲಿ ಬಿಸಾಕಿದ ಒಡೆದ ಬಾಟಲ್, ಟೈರ್ ತುಂಡು, ನೀರು ಹಿಡಿಯುವ ಸಾಮಗ್ರಿ, ತೆಂಗಿನ ಕರಟ, ಮರಗಳಲ್ಲಿನ ಪೊಟರೆ (ಡೊಗರು/ರಂಧ್ರ) ಇವುಗಳಲ್ಲಿ ನೀರು ತುಂಬಿಕೊಂಡಿರುತ್ತದೆ. ಮನೆಯೊಳಗಿನ ಹೂದಾನಿ, ಮೀನು ಮನೆ, ವಾಟರ್ ಕೂಲರ್, ನೀರಿನ ತೊಟ್ಟಿ, ದನದ ಕೊಠಡಿಯಲ್ಲಿ ನಿಂತ ನೀರು, ಮನೆಯಲ್ಲಿರುವ ಮುಚ್ಚಿಡದೆ ನೀರು ತುಂಬಿದ ಬಾಕೆಟ್, ಕೂಡ ಇತ್ಯಾದಿ ಈಡಿಸ್ ಸೊಳ್ಳೆಯ ಸಂತಾನಾಭಿವೃದ್ಧಿ ತಾಣಗಳು. ಇಂತಹ ತಾಣಗಳು ಮಳೆಗಾಲದಲ್ಲಿ ಹೆಚ್ಚು. ಹೀಗಾಗಿ ಈಡಿಸ್ ಸೊಳ್ಳೆಯ ಹಾವಳಿ ಹಾಗೂ ಡೆಂಗಿ ಜ್ವರದ ಉಪಟಳ ಮಳೆಗಾಲದ ದಿನಗಳಲ್ಲಿ ಅತಿ ಹೆಚ್ಚಾಗುತ್ತದೆ.

ರೋಗಿಗಳ ರಕ್ತದಿಂದ ವೈರಸ್‌ಗಳನ್ನು ಪಡೆದ ಸೊಳ್ಳೆಯ ದೇಹದಲ್ಲಿ ವೈರಸ್‌ಗಳು ಪುಂಖಾನುಪುಂಖವಾಗಿ ವೃದ್ಧಿಸುತ್ತವೆ. ಇದು ವಾರದೊಳಗೆ ಸೊಳ್ಳೆ ತಾನು ಕಚ್ಚಿದವರಿಗೆ ರೋಗ ಹರಡಲು ಸಮರ್ಥವಾಗುತ್ತದೆ. ಸೊಳ್ಳೆ ಕಡಿದ ಐದಾರು ದಿನಗಳಲ್ಲಿ ರೋಗ ಲಕ್ಷಣಗಳು ಪ್ರಕಟವಾಗುತ್ತವೆ.

## ಡೆಂಗಿ ಜ್ವರದ ಲಕ್ಷಣಗಳು

❖ ಇದಕ್ಕಿದ್ದಂತೆ ವಿಪರೀತ ಜ್ವರ, ಚಳಿ
❖ ತಲೆನೋವು ಮೈಕೈ ನೋವು, ಮೂಳೆ ಖಂಡಗಳಲ್ಲಿ ನೋವು
❖ ಮೂಳೆ ಮುರಿದು ಹೋಗುತ್ತವೆ ಏನೋ ಎನ್ನುವಷ್ಟು ನೋವು
❖ ಕಣ್ಣು ಗುಡ್ಡೆಯ ಹಿಂದೆ ವಿಪರೀತ ನೋವು
❖ ಆಯಾಸ, ಹಸಿವಾಗದಿರುವುದು, ರುಚಿ ಇಲ್ಲದಿರುವುದು, ನಿತ್ರಾಣ
❖ ಗಂಟಲು ನೋವು, ಹೊಟ್ಟೆಯಲ್ಲಿ ಹಿಂಡಿದಂತಹ ನೋವು
❖ ಮೈ ಕೈ ಮುಖದ ಮೇಲೆ ಗಸಗಸೆಯಷ್ಟು ಪುಟ್ಟ ಪುಟ್ಟ ಗುಳ್ಳೆಗಳು ಕಾಣಿಸುವುದು

ಸಾಮಾನ್ಯ ಚಿಕಿತ್ಸೆಯಿಂದ ಕಾಯಿಲೆಯ ಲಕ್ಷಣಗಳು ಒಂದು ವಾರದಲ್ಲಿ ಸಂಪೂರ್ಣವಾಗಿ ಮಾಯವಾಗುತ್ತದೆ. ನಿತ್ರಾಣ ಒಂದೆರಡು ವಾರ ಮುಂದುವರೆಯುತ್ತದೆ. ಹೀಗಾಗಿ ಇತರೆ ವೈರಸ್ ಜ್ವರಗಳಂತೆ ಡೆಂಗಿ ಜ್ವರವೂ ಸಹ ನಿರಪಾಯಕಾರಿ. ಮಾಮೂಲಿ ಡೆಂಗಿ ಜ್ವರದಿಂದ ಸಾವು ಸಂಭವಿಸುವುದು ವಿರಳದಲ್ಲಿ ವಿರಳ.

## ಉಗ್ರರೂಪದ ಡೆಂಗಿ

ಕೆಲವೊಮ್ಮೆ ಡೆಂಗಿ ಉಗ್ರರೂಪಕ್ಕೆ ತಿರುಗುವುದುಂಟು. ಇದನ್ನು ರಕ್ತಸ್ರಾವ ಮಾಡುವ ಡೆಂಗಿ, ದಿಗಿಲು (ಶಾಕ್) ಪಡಿಸುವ ಡೆಂಗಿ ಎನ್ನುತ್ತಾರೆ. ಈ ಎರಡೂ ಸಂದರ್ಭಗಳೂ ಡೆಂಗಿ ಗಂಭೀರ ರೂಪಗಳು.

## ವಿಷಮ ಸ್ಥಿತಿ

ಡೆಂಗಿ ವಿಷಮ ಸ್ಥಿತಿಗೆ ತಿರುಗುವುದುಂಟು. ಆಗಲೂ ರೋಗಿಯಲ್ಲಿ ಮಾಮೂಲಿ ಡೆಂಗಿ ರೋಗ ರಕ್ಷಣಗಳಿರುತ್ತವೆ; ಜೊತೆಗೆ ಜ್ವರ ಬಹಳ ಏರುತ್ತದೆ (40 ಡಿಗ್ರಿ – 41 ಡಿಗ್ರಿ ಸೆಂ.) ದೇಹದ ಚರ್ಮದಲ್ಲಿ ಚಿಕ್ಕ ಚಿಕ್ಕ ರಕ್ತಸ್ರಾವ ಕಾಣಿಸುತ್ತದೆ. ಬಿಳಿ ರಕ್ತ ಕಣಗಳ ಸಂಖ್ಯೆ ಅದರಲ್ಲೂ ಮುಖ್ಯವಾಗಿ ಪ್ಲೇಟ್‌ಲೆಟ್ ಕಣಗಳ ಸಂಖ್ಯೆ ಕ್ಷೀಣಿಸುತ್ತದೆ. ಪ್ಲೇಟ್‌ಲೆಟ್ ಸಂಖ್ಯೆಯ ಇಳಿಮುಖವೇ ರೋಗಿಯ ಸಾವಿಗೆ ಮುಖ್ಯ ಕಾರಣ. ರಕ್ತಸ್ರಾವ ಹೆಚ್ಚಿದಂತೆ ರೋಗಿಯ ಸ್ಥಿತಿ ಗಂಭೀರವಾಗುತ್ತದೆ. ಬಿ.ಪಿ., ನಾಡಿಮಿಡಿತ ಕಡಿಮೆಯಾಗುತ್ತದೆ. ರೋಗಿ 'ಶಾಕ್' ಸ್ಥಿತಿಗೆ ಹೋದಾಗ ಕೈಕಾಲೂ ತಣ್ಣಗಾಗುತ್ತದೆ ರೋಗಿಯ ಪ್ರಜ್ಞೆ ತಪ್ಪುತ್ತದೆ. ರೋಗಿಯನ್ನು ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ವ್ಯವಸ್ಥಿತವಾಗಿ ಚಿಕಿತ್ಸೆ ನೀಡಿದರೆ ಪೂರ್ಣವಾಗಿ ಗುಣಮುಖನಾಗುತ್ತಾನೆ. ರೋಗಿಗೆ ಪ್ಲಾಸ್ಮ, ಪ್ಲೇಟ್‌ಲೆಟ್, ರಕ್ತದ ಪೂರೈಕೆಯ ಅವಶ್ಯಕತೆ ಅತ್ಯಗತ್ಯವಾಗಿರುತ್ತದೆ. ಒಟ್ಟಿನಲ್ಲಿ ಉತ್ತಮ ಆರೈಕೆ ಮತ್ತು ಚಿಕಿತ್ಸೆಯಿಂದ ಕಾಯಿಲೆ ಮತ್ತು ಕಾಯಿಲೆಯ ಅಪಾಯಗಳಿಂದ ರೋಗಿಯನ್ನು ಪಾರು ಮಾಡಬಹುದು.

## ಸೊಳ್ಳೆಗಳ ಸಂಹಾರ

ಡೆಂಗಿ ವೈರಸ್‌ಗಳನ್ನು ಕೊಲ್ಲಬಲ್ಲ ಔಷಧಿ ಇಲ್ಲ. ಡೆಂಗಿ ಪ್ರತಿಬಂಧಿಸುವ ಲಸಿಕೆಯೂ ಲಭ್ಯವಿಲ್ಲ. ಹೀಗಾಗಿ ಸೊಳ್ಳೆಗಳ ನಿರ್ಮೂಲನೆ (ಸಂಹಾರ)ದಿಂದ ಮಾತ್ರ ಡೆಂಗಿ ಕಾಯಿಲೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದು. ಈಡಿಸ್ ಸೊಳ್ಳೆಗಳನ್ನು ಸಂಹರಿಸುವ ಕೆಲ ಮಾರ್ಗಗಳೆಂದರೆ..

❖ ಮನೆ ಮತ್ತು ವಾಸ ಪರಿಸರವನ್ನು ಕೀಟನಾಶಕ ಬಳಸಿ ಸೊಳ್ಳೆಗಳಿಂದ ಮುಕ್ತಿಗೊಳಿಸಬಹುದು. ಜೊತೆಗೆ ವಾಸ ಪರಿಸರವನ್ನು ಶುಚಿಯಾಗಿರಿಸಬೇಕು. ನೀರು ನಿಲ್ಲುವ ತಾಣಗಳನ್ನು ನಿವಾರಿಸಬೇಕು.
❖ ಸೊಳ್ಳೆಗಳಿಂದ ರಕ್ಷಣೆ ಪಡೆಯಲು, ಮೈಮುಚ್ಚುವಂತೆ ಬಟ್ಟೆ ಧರಿಸಬೇಕು ಮನೆಯ ಕಿಟಕಿ ಬಾಗಿಲನ್ನು ಸೊಳ್ಳೆ– ಜಾಲರಿಯಿಂದ ಮುಚ್ಚಿಸಬೇಕು. ಹಗಲು ಕಚ್ಚುವ ಸೊಳ್ಳೆ ಬಗ್ಗೆ ಎಚ್ಚರಿಕೆಯಿಂದಿರಬೇಕು.
❖ ರಸ್ತೆಯಲ್ಲಿ, ಬೀದಿಯಲ್ಲಿ, ಎಲ್ಲೆಂದರಲ್ಲಿ ನೀರು ತುಂಬುವ ಸಾಮಗ್ರಿ (ತೆಂಗಿನ ಚಿಪ್ಪು, ಒಡೆದ ಡಬ್ಬಿ, ಬಾಟಲ್, ಟೈರ್)ಗಳನ್ನು ಎಸೆಯಬಾರದು. ಇವು ಕಂಡರೆ ತೆಗೆದುಹಾಕಿ.
❖ ಮನೆಯ ನೀರಿನ ಟ್ಯಾಂಕ್, ನೀರು ಸಂಗ್ರಹಗಳನ್ನು ಮುಚ್ಚಿಟ್ಟಿರಬೇಕು. ಏಕೆಂದರೆ ಇಲ್ಲೇ ಈಡಿಸ್ ಸೊಳ್ಳೆ ಸಂತಾನಾಭಿವೃದ್ಧಿ ಮಾಡುತ್ತದೆ.
❖ ವಾರಕೊಮ್ಮೆಯಾದರೂ ನೀರು ತುಂಬಿಕೊಳ್ಳುವ ಪರಿಕರ (ಬಕೆಟ್ ಕೊಡ, ಕೊಳಗ, ಟ್ಯಾಂಕ್)ಗಳನ್ನು ಖಾಲಿ ಮಾಡಿ ಮಗುಚಿ ಹಾಕಿ ಗಾಳಿಗೊಡ್ಡಬೇಕು. ಜೊತೆಗೆ ಮೀನ್ಮನೆ, ಏರ್ ಕೂಲರ್, ಫ್ಲವರ್ ವಾಜ್‌ಗಳನ್ನೂ ಸ್ವಚ್ಛ ಮಾಡಬೇಕು.
❖ ಡೆಂಗಿ ಸಾಂಕ್ರಾಮಿಕವಾಗಿರುವಾಗ, ಜನರು ಜ್ವರ ಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು. ತಾವೇ ಸ್ವಯಂ ಚಿಕಿತ್ಸೆ ಮಾಡಿಕೊಂಡು, ಜ್ವರವನ್ನು ಅಲಕ್ಷಿಸಬಾರದು.

## ಚಿಕನ್‌ಗುನ್ಯದಿಂದಲೂ ಪಾರಾಗಬಹುದು

ಈಡಿಸ್ ಸೊಳ್ಳೆಗಳ ಉಪಟಳದಿಂದ ತಪ್ಪಿಸಿಕೊಂಡರೆ, ನಾವು ಸುಲಭವಾಗಿ ಚಿಕನ್‌ಗುನ್ಯದಿಂದಲೂ ಪಾರಾಗಬಹುದು. ಹೇಗೆಂದರೆ, ಚಿಕನ್‌ಗುನ್ಯ ಕಾಯಿಲೆಗೆ ಕಾರಣ ಒಂದು ವೈರಸ್. ಈ ವೈರಸ್‌ಗಳನ್ನು ಮಾನವನಿಗೆ ಅಂಟಿಸುವುದೂ ಸಹ ಈಡಿಸ್ ಜಾತಿಯ ಸೊಳ್ಳೆ. ಚಿಕ್ಕನ್‌ಗುನ್ಯ, ಡೆಂಗಿಯಷ್ಟು ಅಪಾಯಕಾರಿ ಅಲ್ಲದಿದ್ದರೂ ದೀರ್ಘಕಾಲದವರೆಗೆ ಕೀಲುನೋವು ವೇದನೆ ನೀಡುತ್ತದೆ. ಈ ಕಾಯಿಲೆಗಳೇ ಇಲ್ಲದಂತೆ ಮಾಡಲು ಈಡಿಸ್ ಸೊಳ್ಳೆಗಳ ನಿರ್ಮೂಲನೆ ಅತ್ಯಗತ್ಯ. ■